ದೊಡ್ಡಬಳ್ಳಾಪುರಕ್ಕೆ ಕುಡಿಯುವ ನೀರಿನ ಯೋಜನೆಗಳ ಅನುಷ್ಠಾನ

311 (2442) - ಶ್ರೀ ಕೃಷ್ಣಪ್ಪ ವಿ. (ದೊಡ್ಡಬಳ್ಳಾಪುರ): ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದೊಡ್ಡಬಳ್ಳಾಪುರ ನಗರದ ಒಳಚರಂಡಿ ವ್ಯವಸ್ಥೆ ಹಾಗೂ ಜಕ್ಕಲ ಮಡಗು ಜಲಾಶಯದಿಂದ ಕುಡಿಯುವ ನೀರಿನ ವ್ಯವಸ್ಥೆಯ ಅನುಷ್ಠಾನ ಈಗ ಯಾವ ಹಂತದಲ್ಲಿದೆ.

ಆ) ಈ ಯೋಜನೆಗೆ ಎಷ್ಟು ಹಣ ನಿಗಧಿಪಡಿಸಲಾಗಿದೆ.

ಇ) ಕಾಮಗಾರಿಗಳನ್ನು ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಯವರು):

ಅ) ದೊಡ್ಡಬಳ್ಳಾಪುರ ನಗರಕ್ಕೆ ಹಾಗೂ ಮಾರ್ಗಮಧ್ಯದಲ್ಲಿ ಬರುವ 6 ಹಳ್ಳಿಗಳಿಗೆ ಜಕ್ಕಲಮಡಗು ಜಲಾಶಯದಿಂದ ಕುಡಿಯುವ ನೀರು ಸರಬರಾಜು ಯೋಜನೆಗೆ ರೂ. 2249.68 ಲಕ್ಷಗಳಿಗೆ ಸರ್ಕಾರದ ಅಧಿಸೂಚನೆ ಸಂಖ್ಯೆ ಸಅಇ 23 ಯುಡಬ್ಲ್ಯುಎಸ್ 2002, ದಿನಾಂಕ 4.6.2002 ರಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. ಸದರಿಯೋಜನಗೆ ಟೆಂಡರ್ ಕರೆಯಲಾಗಿದ್ದು, ಗುತ್ತಿಗೆದಾರರನ್ನು ನೇಮಿಸುವ ಪ್ರಕ್ರಿಯೆ ಪ್ರಗತಿಯಲ್ಲಿದೆ. ನೀರು ಸರಬರಾಜು ಯೋಜನೆ ಪೂರ್ಣಗೊಂಡ ನಂತರ ಒಳಚರಂಡಿ ಯೋಜನೆಯನ್ನು ಕೈಗೆತ್ತಿಕೊಳ್ಳಲಾಗುವುದು.

ಆ) ನೀರು ಸರಬರಾಜು ಯೋಜನೆಗೆ ಅಂದಾಜು ರೂ. 2249.68 ಲಕ್ಷಗಳು.

ಇ) ಆದಷ್ಟು ಶೀಘ್ರವಾಗಿ ಈ ಯೋಜನೆಯನ್ನು ಕೈಗೆತ್ತಿಕೊಳ್ಳಲು ಕ್ರಮ ಜರುಗಿಸಲಾಗುವುದು.

ಸೋಮವಾರಪೇಟೆ ಪಟ್ಟಣ ಪಂಚಾಯಿತಿಗೆ ಕುಡಿಯುವ ನೀರಿನ ವ್ಯವಸ್ಥೆ

313 (2375) - ಶ್ರೀ ಅಪ್ಪಚ್ಚು ರಂಜನ್ ಎಂ.ಪಿ. (ಸೋಮವಾರಪೇಟೆ) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸೋಮವಾರ ಪೇಟೆ ಪಟ್ಟಣ ಪಂಚಾಯಿತಿಗೆ ಕುಡಿಯುವ ನೀರಿನ ಸರಬರಾಜು ಮಾಡಲು ಏನು ಕ್ರಮ ಕೈಗೊಳ್ಳಲಾಗಿದೆ?

ಆ) ಕಳೆದ ಒಂದು ವರ್ಷದಿಂದ ಸದರಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳದಿರಲು ಕಾರಣವೇನು?

ಇ) ಕಾಮಗಾರಿ ಈಗ ಯಾವ ಹಂತದಲ್ಲಿದೆ ವಿವರ ನೀಡುವುದು.

ಈ) ಅದನ್ನು ಯಾವಾಗ ಪೂರ್ಣಗೊಳಿಸಲಾಗುವುದು?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಯವರು):

ಅ) ಹಾರಂಗಿ ಜಲಾಶಯ ಮೂಲದಿಂದ ಸೋಮವಾರ ಪೇಟೆ ಪಟ್ಟಣಕ್ಕೆ ಹಾಗೂ ಸುತ್ತ ಮುತ್ತಲಿನ 4 ಹಳ್ಳಿಗಳಿಗೆ ಸೇರಿ ನೀರು ಸರಬರಾಜು ಯೋಜನೆ ಕಾರ್ಯ ಸಾಧ್ಯತಾ ವರದಿಯನ್ನು ರೂ. 532.00 ಲಕ್ಷಗಳಿಗೆ ತಯಾರಿಸಿದೆ.

ಆ) ಈ ಯೋಜನೆಗೆ 532.00 ಲಕ್ಷ ರೂ.ಗಳ ಸಾಧ್ಯತಾ ವರದಿಯನ್ನು ತಯಾರಿಸಿದ್ದು, ಆ ಪೈಕಿ 354.66 ಲಕ್ಷ ರೂ.ಗಳನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಭರಿಸಬೇಕಾಗಿರುತ್ತದೆ. ಈ ಯೋಜನೆಗೆ ಸವಿವರ ಅಂದಾಜುಗಳ ತಯಾರಿಸಲು ಜಲ ಮಂಡಲಿಗೆ ಸೂಚಿಸಲಾಗಿದೆ. ಸವಿವರ ಅಂದಾಜು ಸರ್ಕಾರಕ್ಕೆ ಬಂದ ಕೂಡಲೇ ಆಡಳಿತಾತ್ಮಕ ಅನುಮೋದನೆ ನೀಡಲು ಜರುಗಿಸಲಾಗುವುದು.

ಇ) ಉದ್ಭವಿಸುವುದಿಲ್ಲ.

ಈ) ಆಧ್ಯತೆ ಮೇರೆಗೆ ಈ ಯೋಜನೆಯನ್ನು ಕೈಗೆತ್ತಿಕೊಳ್ಳಲು ಕ್ರಮ ಜರುಗಿಸಲಾಗುವುದು.

ದಿನಗೂಲಿ ನೌಕರರನ್ನು ಸಕ್ರಮಗೊಳಿಸುವುದು

315 (2570) - ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ): ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ವಿವಿಧ ಇಲಾಖೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ದಿನಗೂಲಿ ನೌಕರರ ಸಂಖ್ಯೆ ಎಷ್ಟು; (ಇಲಾಖಾವಾರು ವಿವರ ನೀಡುವುದು);

ಆ) 1.7.84ರ ನಂತರ ದಿನಗೂಲಿ ಆಧಾರದ ಮೇಲೆ ನೇಮಕಾತಿಯಾದ ನೌಕರರು ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಿದ್ದು ಅಂತಹ ನೌಕರರನ್ನು ಮಾತ್ರ ಖಾಯಂಗೊಳಿಸಲಾಗಿದ್ದು, ಆ ದೇಶದ ಇತರರಿಗೆ ಅನ್ವಯಿಸುವುದಿಲ್ಲವೆ;

ಇ) ಈ ಆದೇಶ ಅನ್ವಯಿಸದಿದ್ದರೆ ಪ್ರತಿಯೊಬ್ಬ ದಿನಗೂಲಿ ನೌಕರನು ವೈಯಕ್ತಿಕವಾಗಿ ನ್ಯಾಯಾಲಯದ ಮೊರೆ ಹೋಗುವ ಅವಶ್ಯಕತೆ ಇದೆಯೇ;

ಈ) 1.7.1984ರ ನಂತರ ನೇಮಕಗೊಂಡ ದಿನಗೂಲಿ ನೌಕರರನ್ನು ಸಕ್ರಿಗೊಳಿಸುವ ವಿಷಯದಲ್ಲಿ ಉಪಸಮಿತಿ ರಚಿಸಿರುವುದು ನಿಜವೇ; ಈ ಸಮಿತಿ ಯಾವಾಗ ರಚನೆಯಾಯಿತು; ಉಪ ಸಮಿತಿ ರಚನೆಗೊಂಡ ನಂತರ ತೆಗೆದುಕೊಂಡ ತೀರ್ಮಾನದ ವಿವರವೇನು;

ಉ) ಈ ದಿನಗೂಲಿ ನೌಕರರ ಸೇವೆಯನ್ನು ಸಕ್ರಮಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮವೇನು?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಯವರು) :

ಅ) ಲಭ್ಯವಿರುವ ಮಾಹಿತಿಯ ಪ್ರಕಾರ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಸುಮಾರು 17,000 ದಿನಗೂಲಿ ನೌಕರರು ಇದ್ದಾರೆ. (ಇಲಾಖಾವಾರು ವಿವರ ಪಟ್ಟಿಯನ್ನು ಲಗತ್ತಿಸಿದೆ)

ಆ) ನ್ಯಾಯಾಲಯದ ಆದೇಶಗಳು ಅರ್ಜಿದಾರರಿಗೆ ಮಾತ್ರ ಅನ್ವಯವಾಗುತ್ತದೆ. ಇತರರಿಗೆ ಅನ್ವಯ್ಸಿಗುವುದಿಲ್ಲ.

ಇ) ದಿನಾಂಕ: 1.7.84 ರ ನಂತರ ನೇಮಕಾತಿ ಹೊಂದಿರುವ ದಿನಗೂಲಿ ನೌಕರರ ಸೇವೆಯನ್ನು ಸಕ್ರಮಗೊಳಿಸಬೇಕೆಂದು ಕೋರಿ ಕರ್ನಾಟಕ ಸಾಂದರ್ಭಿಕ ಹಾಗೂ ದಿನಗೂಲಿ ನೌಕರರ ಸಂಘ, ಹುಬ್ಬಳ್ಳಿಯು ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ: 12610:93 ಮತ್ತು 28248-449:98ನ್ನು ಸಲ್ಲಿಸಿತ್ತು. ಈ ರಿಟ್ ಅರ್ಜಿದಾರರ ಮನವಿಯನ್ನು ಪರಿಗಣಿಸಬೇಕೆಂದು ದಿನಾಂಕ: 22.9.98 ರಂದು ನ್ಯಾಯಾಲಯವು ತೀರ್ಪನ್ನು ನೀಡಿತ್ತು. ಈ ತೀರ್ಪಿನ ವಿರುದ್ಧ ಸರ್ಕಾರವು ಉಚ್ಚ ನ್ಯಾಯಾಲಯದ ವಿಭಾಗೀಯ ಪೀಠದ ಮುಂದೆ ರಿಟ್ ಮೇಲ್ಮನವಿ ಸಲ್ಲಿಸಿತ್ತು. (ರಿಟ್ ಮೇಲ್ಮನವಿ ಸಂಖ್ಯೆ: 120 ಮತ್ತು 128-329:1999) ವಿಭಾಗೀಯ ಪೀಠವು ದಿನಾಂಕ:1.2.2001 ರಂದು ತೀರ್ಪನ್ನು ನೀಡಿ ದಿನಾಂಕ: 22.9.98ರ ಆದೇಶವನ್ನು ತಳ್ಳಿ ಹಾಕಿ ಸರ್ಕಾರವು ಸಲ್ಲಿಸಿದ್ದ ರಿಟ್ ಅಪೀಲನ್ನು ಪುರಸ್ಕರಿಸಿ, ದಿನಾಂಕ:1.7.84 ರ ನಂತರ